Test Paper : II

Test Subject : **KANNADA**

Test Subject Code : **K-0216**

Test Booklet Serial No. : ____________________

OMR Sheet No. : ____________________

Roll No. | | | | | | | | |

(Figures as per admission card)

**Name & Signature of Invigilator/s**

Signature : ____________________

Name : ____________________

**Paper : II**

**Subject : KANNADA**

Time : 1 Hour 15 Minutes

Maximum Marks : 100

Number of Pages in this Booklet : **8**

Number of Questions in this Booklet : **50**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಐವತ್ತು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   **ಉದಾಹರಣೆ:** (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆ ಪತ್ರಿಕೆ I ರಲ್ಲಿ **ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ, ಪ್ರಶ್ನೆ ಪತ್ರಿಕೆ I ಮತ್ತು ಪ್ರಶ್ನೆ ಪತ್ರಿಕೆ II ರಲ್ಲಿ ಇರುವ ಪ್ರಶ್ನೆಗಳಿಗೆ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು.** OMR ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗಿರುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್, ವಿದ್ಯುನ್ಮಾನ ಉಪಕರಣ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**
14. **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example** : (A) (B) ● (D)
   where (C) is the correct response.
5. Your responses to the questions are to be indicated in the **OMR Sheet kept inside the Paper I Booklet only**. If you mark at any place other than in the circles in the OMR Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet after the examination.
11. **Use only Blue/Black Ball point pen.**
12. **Use of any calculator, Electronic gadgets or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**

Total Number of Pages : 8

# ಕನ್ನಡ
## ಪೇಪರ್ – II

**ಗಮನಿಸಿ :** ಈ ಪತ್ರಿಕೆಯು **(50) ಐವತ್ತು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳನ್ನೂ **ಕಡ್ಡಾಯ**ವಾಗಿ ಉತ್ತರಿಸಬೇಕು.

**1.** 'ಗೊಮ್ಮಟ ಸ್ತುತಿ' ಶಾಸನದ ಕಾಲ

(A) 14 ನೇ ಶತಮಾನ (B) 13 ನೇ ಶತಮಾನ

(C) 12 ನೇ ಶತಮಾನ (D) 11 ನೇ ಶತಮಾನ

**2.** ಕನ್ನಡ ಕಬ್ಬಂಗಳೊಳ್ 'ಅಗಣಿತ ಗುಣ ಗದ್ಯ ಪದ್ಯ ಸಮ್ಮಿಶ್ರಿತ' ಸ್ವರೂಪವನ್ನು ಹೇಳಿದ ಕೃತಿ

(A) ಕಾವ್ಯಾವಲೋಕನ

(B) ಕವಿರಾಜ ಮಾರ್ಗ

(C) ಕರ್ಣಾಟಕ ಭಾಷಾಭೂಷಣ

(D) ಕರ್ಣಾಟಕ ಶಬ್ದಾನುಶಾಸನ

**3.** 'ದಿನಪಸುತನಂ ಕೊಲಿಸಿದ ನೆಲನೊಡನೆ ಮತ್ತೆ ಪ್ರದುವಾಟ್ಟಪನೆ'. ಈ ಉಕ್ತಿ ಬಂದಿರುವ ಕೃತಿ

(A) ಗದಾಯುದ್ಧಂ (B) ಕರ್ನಾಟಕ ಕಾದಂಬರಿ

(C) ಪಂಪಭಾರತ (D) ನೇಮಿನಾಥ ಪುರಾಣ

**4.** ಹೊಯ್ಸಳ ದೊರೆ ವೀರಬಲ್ಲಾಳನ ಆಶ್ರಯದಲ್ಲಿದ್ದ ಕವಿ

(A) ಬ್ರಹ್ಮಶಿವ (B) ನಯಸೇನ

(C) ರುದ್ರಭಟ್ಟ (D) I ನೆಯ ನಾಗವರ್ಮ

**5.** 'ಅಯ್ಯಾ ನೀ ಕೇಳಿದರೆ ಕೇಳು, ಕೇಳದಿರ್ದಡೆ ಮಾಣು, ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ' ಎಂದು ಹೇಳಿದವರು

(A) ಅಕ್ಕಮಹಾದೇವಿ

(B) ಬಸವಣ್ಣ

(C) ಅಂಬಿಗರ ಚೌಡಯ್ಯ

(D) ಸಿದ್ಧರಾಮ

**6.** 'ಕೃಷ್ಣ–ಬಾಣಾಸುರ ಯುದ್ಧದ ಕಥಾನಕ' ಇರುವ ಸಾಂಗತ್ಯ ಕೃತಿ

(A) ಕುಮಾರರಾಮನ ಸಾಂಗತ್ಯ

(B) ಭರತೇಶ ವೈಭವ

(C) ಕಂಠೀರವ ನರಸರಾಜು ವಿಜಯ

(D) ಮೋಹನ ತರಂಗಿಣಿ

**7.** 'ಪರಮಾರ್ಥ ಗೀತೆ' ಈ ಕೃತಿಯ ಕರ್ತೃ

(A) ನಿಜಗುಣ ಶಿವಯೋಗಿ

(B) ನರಹರಿ

(C) ಕುಮಾರ ವಾಲ್ಮೀಕಿ

(D) ಮುಪ್ಪಿನ ಷಡಕ್ಷರಿ

**8.** 'ಕಾಯ ಬಲಿದಡೆ ಮಾಯೆ ಬಲಿವುದು, ಮಾಯೆ ಬಲಿದಡೆ ಛಾಯೆ ಬಲಿವುದು'. ಉಕ್ತಿಯು ಕಂಡುಬರುವ ಕಾವ್ಯ

(A) ಬಸವ ಪುರಾಣ

(B) ವೀರಶೈವಾಮೃತ ಮಹಾಪುರಾಣ

(C) ಬಸವರಾಜ ವಿಜಯ

(D) ಪ್ರಭುಲಿಂಗಲೀಲೆ

**9.** 'ನವ ಜೀವನ' ಪತ್ರಿಕೆಯ ಸಂಪಾದಕರು

(A) ಕೆ. ವಿ. ಅಯ್ಯರ್

(B) ದೇವುಡು

(C) ಆರ್.ಸಿ. ಹಿರೇಮಠ

(D) ಬಸವರಾಜ ಕಟ್ಟೀಮನಿ

**10.** 'ತಿರುಳ್ಗನ್ನಡದ ತಿರುಕ' ಇವರ ಕಾವ್ಯ ನಾಮ

(A) ಡೆಪ್ಯೂಟಿ ಚೆನ್ನಬಸಪ್ಪ

(B) ಬಸವಪ್ಪಶಾಸ್ತ್ರೀ

(C) ಎ. ಆರ್. ಕೃಷ್ಣಶಾಸ್ತ್ರೀ

(D) ಉತ್ತಂಗಿ ಚೆನ್ನಪ್ಪ

**11.** 'ಲಚ್ಚ' ಈ ಪಾತ್ರ ಬರುವ ಕಾದಂಬರಿ

(A) ಅಳಿದ ಮೇಲೆ (B) ವೈಶಾಖ

(C) ಕಾನೂರು ಹೆಗ್ಗಡಿತಿ (D) ಗ್ರಾಮಾಯಣ

**12.** 'ಒಲುಮೆ' ಕೃತಿಯ ಲೇಖಕರು

(A) ಕುವೆಂಪು (B) ತ.ರಾ.ಸು.

(C) ಸಿದ್ಧಯ್ಯ ಪುರಾಣಿಕ (D) ತೀ.ನಂ.ಶ್ರೀ.

**13.** 'ವಾಕ್ಯಂ ರಸಾತ್ಮಕಂ ಕಾವ್ಯಂ' ಎಂದು ಹೇಳಿದ ಅಲಂಕಾರಿಕ
(A) ಆನಂದವರ್ಧನ (B) ವಿಶ್ವನಾಥ
(C) ಅಭಿನವಗುಪ್ತ (D) ಭಟ್ಟನಾಯಕ

**14.** 'ಭಾವದಿಂ ಪುಟ್ಟುಗುಂ ಒದವಿ ರಸಂಗಳ್' ಎಂದು ಹೇಳಿದವನು
(A) ಕವಿಕಾಮ (B) ಸಾಳ್ವ
(C) ಉದಯಾದಿತ್ಯ (D) ತಿರುಮಲಾರ್ಯ

**15.** ಲಾಂಜಿನಸ್‌ನ ಭವ್ಯತೆಯ ಮೀಮಾಂಸೆಯು ಮುಖ್ಯವಾಗಿ ಇದನ್ನು ಒಳಗೊಳ್ಳುತ್ತದೆ.
(A) ಭಾವನೆ (B) ದರ್ಶನ
(C) ಶೈಲಿ (D) ದೈವ ಕುರಿತ ಕಲ್ಪನೆ

**16.** 'ಇಮ್ಯಾಜಿನೇಶನ್' ಎನ್ನುವ ತತ್ವವು ಈ ಅಂಶವನ್ನು ಕುರಿತಿದ್ದು
(A) ಸಾಹಿತ್ಯ-ಸಂಯೋಜನೆಗೆ ಸಂಬಂಧಿಸಿದ್ದು
(B) ಹೊಸ ಸೃಷ್ಟಿಗೆ ಸಂಬಂಧಿಸಿದ್ದು
(C) 'ಕಲ್ಪನೆ'ಗೆ ಸಂಬಂಧಿಸಿದ ಅಂಶ
(D) ಅನುಕರಣೆಯನ್ನು ತೀವ್ರವಾಗಿಸುವ ತತ್ತ್ವ

**17.** ಉಭಯ ಪದಾರ್ಥ ಪ್ರಧಾನವಾದ ಸಮಾಸ
(A) ತತ್ಪುರುಷ (B) ಕರ್ಮಧಾರೆಯ
(C) ದ್ವಂದ್ವ (D) ದ್ವಿಗು

**18.** ಇವುಗಳಲ್ಲಿ ಅಘೋಷ ಧ್ವನಿಮಾಗಳು
(A) ಗ ಜ ಡ ದ ಬ (B) ಅ ಇ ಉ ಎ ಒ
(C) ಕ ಚ ಟ ತ ಪ (D) ಙ.ಞ.ಣ.ನ.ಮ

**19.** ಕನ್ನಡ ಭಾಷೆಯ ಪ್ರಾಚೀನತೆಯನ್ನು ನಿರ್ಣಯಿಸುವಲ್ಲಿ ಸಹಾಯಕವಾದ ಶಾಸನ
(A) ಜಯಸಿಂಹನ ತಳಂಗೆರೆ ಶಾಸನ
(B) ಅಶೋಕನ ಬ್ರಹ್ಮಗಿರಿಯ ಶಾಸನ
(C) ಬಾದಾಮಿಯ ಕಪ್ಪೆ ಅರಭಟನ ಶಾಸನ
(D) ಲಕ್ಕುಂಡಿಯ ಅತ್ತಿಮಬ್ಬೆ ಶಾಸನ

**20.** ಅಧಿಕರಣಾರ್ಥದಲ್ಲಿ ಯಾವ ವಿಭಕ್ತಿಯನ್ನು ಬಳಸಲಾಗುತ್ತದೆ ?
(A) ತೃತೀಯ (B) ದ್ವಿತೀಯ
(C) ಸಪ್ತಮೀ (D) ಷಷ್ಠೀ

**ಬಹು ಆಯ್ಕೆ ಮಾದರಿ ಪ್ರಶ್ನೆಗಳು :**

**21.** ತಮಟಕಲ್ಲು ಶಾಸನದಲ್ಲಿ ಬಳಸಿದ ಪದಗಳು
I. ಫಣಮಣಿ
II. ಪ್ರವರನ್
III. ಲಂಜಿಗೇಸರಂ
IV. ಕಲಿಯುಗ ವಿಪರೀತನ್
(A) I ಮತ್ತು II
(B) II ಮತ್ತು III
(C) I ಮತ್ತು IV
(D) II ಮತ್ತು IV

**22.** ಇವರು ಪಂಪ ಪೂರ್ವ ಯುಗದ ಕವಿಗಳು
I. ಅಸಗ ಮತ್ತು ಗುಣನಂದಿ
II. ನಾಗಚಂದ್ರ ಮತ್ತು ಶಾಂತಿನಾಥ
III. ಕವೀಶ್ವರ ಮತ್ತು ಚಂದ್ರಕವಿ
IV. ನಾಗವರ್ಮ ಮತ್ತು ಚಾವುಂಡರಾಯ
(A) I ಮತ್ತು II
(B) II ಮತ್ತು IV
(C) I ಮತ್ತು III
(D) II ಮತ್ತು III

**23.** 'ಮುತ್ತುಂ ಮೆಣಸಂ ಕೋದಂತೆ
ಬಡಿಗಂಡನಿಲ್ಲ ಪಾಲನೆ ಕಂಡಂ'
'ಜೋಟಿವಾಳಿ ನೇಱಿಪಿದಂ ಗಂಡಂ ಪೆಱಂಗಂಡನೆ
ತಕ್ಕುದೆ ಬೆರಸಲ್ಕೆ ಘೃತಮಂ ತೈಲಮಂ.'
ಈ ನುಡಿಗಟ್ಟುಗಳು ಕಂಡುಬರುವ ಕಾವ್ಯಗಳು
I. ವಿಕ್ರಮಾರ್ಜುನ ವಿಜಯ ಮತ್ತು ಕವಿರಾಜಮಾರ್ಗ
II. ಯಶೋಧರ ಚರಿತೆ ಮತ್ತು ಕಬ್ಬಿಗರ ಕಾವ
III. ರಾಮಚಂದ್ರ ಚರಿತ ಪುರಾಣ ಮತ್ತು ಸುಕುಮಾರ ಚರಿತೆ
IV. ಗದಾಯುದ್ಧಂ ಮತ್ತು ಧರ್ಮಾಮೃತ
(A) II ಮತ್ತು III
(B) I ಮತ್ತು II
(C) III ಮತ್ತು IV
(D) I ಮತ್ತು IV

**24.** ಇವು ವಾರ್ಧಕ ಷಟ್ಪದಿಯಲ್ಲಿರುವ ಕೃತಿಗಳು
I. ಪ್ರಭುಲಿಂಗಲೀಲೆ ಮತ್ತು ವೃಷಭಗೀತೆ
II. ಬಸವಪುರಾಣ ಮತ್ತು ಕುಮಾರವ್ಯಾಸಭಾರತ
III. ಶಿವತತ್ತ್ವ ಚಿಂತಾಮಣಿ ಮತ್ತು ಸೋಮನಾಥ ಚಾರಿತ್ರ
IV. ಜೈಮಿನಿ ಭಾರತ ಮತ್ತು ಸಿದ್ಧರಾಮ ಚಾರಿತ್ರ
(A) I ಮತ್ತು IV (B) III ಮತ್ತು IV
(C) II ಮತ್ತು III (D) I ಮತ್ತು III

**25.** ಬಸವಣ್ಣನವರ ವಚನದ ಸಾಲುಗಳು :
I. ತರಗೆಲೆ ಗಿರಿಕೆಂದೊಡೆ ಹೊರಗನಾಲಿಸುವೆ
II. ನಿಮ್ಮ ಚರಣವ ನೆನೆವಂತೆ ಕರುಣಿಸು ಸೆರಗೊಡ್ಡಿ ಬೇಡುವೆ
III. ಹಾಲನೇಮವ ಹಿಡಿದಾತ ಚಿಕ್ಕಾಗಿ ಹುಟ್ಟುವ
IV. ಮಂಜಿನ ಶಿವಾಲಯಕ್ಕೆ ಬಿಸಿಲ ಕಳಶವುಂಟೆ
(A) I ಮತ್ತು II (B) I ಮತ್ತು IV
(C) II ಮತ್ತು III (D) I ಮತ್ತು III

**26.** ಈ ಕೆಳಗಿನ ಸಾಲುಗಳು ವೀಸಿಯವರ ಕವನದ ಸಾಲುಗಳು.
I. ಆಕೆಯಿದ್ದಳು ಕೂಸು, ಈತನಿನ್ನು ಹುಡುಗ
ಅವರ ತಾಯ್ತಂದೆಗಳ ಹಿಗ್ಗು ಎಷ್ಟು!
II. ಯಾವ ಜನ್ಮದ ಕೆಳೆಯ ಕಾಣೆನು
ಕಂಡ ಕೂಡಲೆ ಒಲಿಸಿತು
III. ಒಳಗು ಹೊರಗು ಬೆಳಗು ಸಂಜೆಯು
ನಿನ್ನ ಮೊಗವೇ ತೇಲಿತು
IV. ಉಗ್ಗು ಸಿಗ್ಗಿನ ಹೆಣ್ಣು : ನನ್ನ ಮುಂದೀ ಹಿಗ್ಗು
ಇನ್ನೊಂದು ದನಿಗಿವಳು ಮುಚ್ಚು ಮೊಗ್ಗು
(A) I ಮತ್ತು II (B) II ಮತ್ತು III
(C) III ಮತ್ತು IV (D) IV ಮತ್ತು I

**27.** ಇವುಗಳಲ್ಲಿ ಯಾವುದು ಸರಿಯಾದ ಹೊಂದಾಣಿಕೆ ?
I. ಶಂಬಾಜೋಶಿ – ಅಧ್ಯಯನ
II. ಬೇಂದ್ರೆ – ಉಪಾಯನ
III. ಎಚ್.ಎಲ್. ನಾಗೇಗೌಡ – ನಾಗವಲ್ಲಿ
IV. ಬಸವರಾಜ ಕಟ್ಟೀಮನಿ – ಕಬ್ಬಿನ ಹಾಲು
(A) I ಮತ್ತು IV (B) II ಮತ್ತು III
(C) III ಮತ್ತು IV (D) I ಮತ್ತು III

**28.** ಇವುಗಳಲ್ಲಿ ಯಾವುದು ಸರಿಯಾದ ಹೊಂದಾಣಿಕೆ ಅಲ್ಲ ?
I. ಕಾವ್ಯಕ್ಕೆ ಕಾರಣ ಆನಂದ
II. ಕಾವ್ಯ ಪ್ರಯೋಜನ ಕೀರ್ತಿ ಸಂಪಾದನೆ
III. ವ್ಯಂಜನಾ ಶಬ್ದಶಕ್ತಿ
IV. ಅನುಭಾವ ಶೋಕ
(A) I ಮತ್ತು IV (B) II ಮತ್ತು III
(C) II ಮತ್ತು IV (D) I ಮತ್ತು III

**29.** ಇವುಗಳಲ್ಲಿ ಸ್ವೀಕರಣ ಪದಗಳು
I. ಜೋಳ ಮತ್ತು ಎಳ್ಳು
II. ದವಾಖಾನೆ ಮತ್ತು ರವಾನೆ
III. ಮುಲಾಜು ಮತ್ತು ಮೊಸರು
IV. ಮೇಜು ಮತ್ತು ಮುಜರಾಯಿ
(A) I ಮತ್ತು II (B) III ಮತ್ತು IV
(C) III ಮತ್ತು I (D) II ಮತ್ತು IV

**30.** ಇವು ಕನ್ನಡ ಸಂಧಿಗಳಿಗೆ ಉದಾಹರಣೆಗಳು
I. ಇಂಚರ ಮತ್ತು ಅಡಿದಾವರೆ
II. ತಿಂಗಳಾಂತ್ಯ ಮತ್ತು ಮಾಸಾವಸಾನ
III. ಬೆಂಗದಿರು ಮತ್ತು ಊರೂರು
IV. ಗುರೂಪದೇಶ ಮತ್ತು ಅಷ್ಟೈಶ್ವರ್ಯ
(A) I ಮತ್ತು III (B) II ಮತ್ತು III
(C) I ಮತ್ತು IV (D) III ಮತ್ತು IV

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ, ಪ್ರಶ್ನೆ 31 ರಿಂದ 35 ರ ವರೆಗೆ ಉತ್ತರಿಸಿ :**

ಅಂತಾ ಸಿಂಹಂ ಮಱುಗುತ್ತಂಬಟ್ಟು ಗೊಂಕರಕಟ್ಟೆಯಂ ಬಯಸಿ ಬಾಯೊಱೆತು ತನಗನುಚರನಪ್ಪುದೊಂದು ನರಿಗೆ ಪೇೞ್ವುದುಮಿದಾವ ಗಹನಮಾಗಳೆ ತರ್ಪೆನಂದಾ ನರಿ ಪೇೞ್ದು ಪೋಗಿಯಸಗರ ಪೊಟೆಯೊಳಾಡುತಿರ್ಪ ಕಟ್ಟೆಯಂ ಕಂಡು ಮೆಲ್ಲನೆ ಸಾರ್ದು-ಭಾವಾ ! ನಿನ್ನೊಡಲ್ ಬಡವಾದುದೇಂ ಕಾರಣಮೆಂದೊಡೇನಂ ಪೇೞ್ವೆನೀಯಸಗನೂರ ಸೀರೆಯೆಲ್ಲಮನನ್ನ ಬೆನ್ನೊಳೊಟ್ಟಿಕೊಂಡುಮುತ್ತಲಿತ್ತಲುಮಾ ಹಾರ್ಠಕ್ಕೆ ಪೋಗಲೀಯನದಱಿಂದೊಡಲುಂ ಬಡವಾದುದೆಂಬುದುಂ ; ಆ ಜಂಬುಕ ನಿಂತೆಂದಂ : ಎಲೆ ಪಾಪಕರ್ಮ, ನಿನಗಿನಿತು

ದುಃಖಮುಳ್ಳೊಡೆ ಮುನ್ನಮೆ ಎನ ಗಱಿಪಿದೆಯಿಲ್ಲ ; ಎನ್ನ ತಂಗಿಯರಪ್ಪ ಗರ್ದಭೆಯರಿರ್ವರ್ ನಿನ್ನಂತೆ ಭಾರಾಕ್ರಾಂತೆಯರಾಗಿರ್ದಳ್ಕಿ ಚಿಂತಿಸುತ್ತಿರ್ದೊಡವರನೊಡಗೊಂಡೆಯ್ದಿ ಎನ್ನಿರ್ಪ ಕಾಡಿನೊಳಿರಿಸೆ ನಿಶ್ಚಿಂತರಾಗಿರ್ದ ಗಾಸಭೀವಿಲಾಸಿನಿಯರ್ ತಮಗೊರ್ವ ಪುರುಷನಂ ತರವೇಟ್ಕುಮೆಂದೆನ್ನಂ ತುತಿಸುತ್ತಿರ್ದಪರ್ ; ನಿನಗಂ ಮನೋರಥಸಿದ್ಧಿ ಯಕ್ಕುಂ ; ಬೇಗಂ ಬಾಯೆನಲೊಡಂ,

ರಾಗಿಸಿ ರಾಸಭನಿರದತಿ
ವೇಗದಿನಾ ನರಿಯ ಪಿಂದುಪಿಂದನೆ ಬಂದಂ
ಮೇಗಪ್ಪಾಯಮಂ ಕಡು
ರಾಗಿಗಳೇಂ ಕಂಡರೊಳರೆ ಭೂಮಂಡಲದೊಳ್

ಅಂತು ಪೋಪುದುಮಾ ನರಿ ಹರಿಯಿರ್ದ ಗುಹಾದ್ವಾರಮಂ ಗರ್ದಭೆಯರೊಳಗಿರ್ದರ್ ಪುಗೆನಲೊಡಂ ; ಪುಗುವ ಕಟ್ತೆಯಂ ಕಂಡು ಸಿಂಹಂ ಜವಂಗುಂದಿದ ಕಾರಣದಿಂ ಲಂಘನಾಸಕ್ತನಾಗಿ ಲಂಘಿಸಲಾಱದೆ ರಭಸಂಗೆಯ್ದಿಯ್ತುರ್ಪುದುಂ ; ಕಟ್ತೆ ಬೆರ್ಚು ತೋಡುತಿರ್ಪುದಂ ಕಂಡು ಸೃಗಾಲಂ ಕರಂ ಮುಳಿದು ಸಿಂಹನಲ್ಲಿಗೆ ಬಂದೇಂ ಗಡ ಕಟ್ತೆಯಂ ಮೊದಲಾಗಿ ಪಿಡಿಯಲಾರ್ತೆಯಿಲ್ಲ, ನೀನೆಂತು ಬರ್ದಪೆಯೆಂದು ನುಡಿಯೆ ; ಹರಿ ಕರಮೆ ಸಿದ್ಧಿಗಾಗಿ ಗುಹೆಯಂ ಪೊಕ್ಕುದಂ ಕೊಲ್ವುದಾವ ಗಹನಮೆಂದನವಧಾನದಿಂ ಪಾಯ್ದ ಕಾರಣದಿಂ ತಪ್ಪಿದುದು, ಇನ್ನದಂ ಕೊಂಡು ಬಾ ; ಕಂಡಾಗಳೆ ಬಿಡಾಲನಿಲಿಯಂ ಕೊಲ್ವಂತಶ್ರಮದೊಳೆ ಕೊಂದಪೆನೆಂದೊಡೆ ; ಮತ್ತೆ ನರಿ ಪರಿದಾ ಕಟ್ತೆಯಂ ಕಂಡೇಂ ಭಾವ ! ನೀಂ ಕಳ್ಳರಂ ಕಂಡ ಬೆಳ್ಳಾಳಂತೆ ಬೆದಱಿಯೆನಗಂ ಪೇಟಿದೆ ಪೆಱಗಂ ನೋಡದೋಡಿ ಬಂದೆಯದೇಂ ಕಾರಣಮೆನೆ ; ರಾಸಭನಿಂತೆಂದಂ : ಆ ಗುಹೆಯನಾಂಪುಗಲೊಡನೊಂದು ರೂಪು ಮೊಱೆದು ಪರಿತಂದು ಮೇಲ್ವಾಯಲೊಡಂ ಭಯಂಬಟ್ಟು ಬಂದೆನೆನೆ ; ಸೃಗಾಲನೆಂದಂ : ಗಾಳುಗಳಪ್ಪ ಗರ್ದಭೆಯರ್ ವಿರೋಧಿ ಕಾಮಿಗಳ ಪ್ಪುದಱಿಂ ಕಾತರಿಸಿ ಮೇಲೆ ಮೇಲೆ ಬೀಟಿಲೊಡಂ ಬಂದೆ, ನಿನ್ನ ಗಂಡುತನದ ಪುರುಳಂ ಕಂಡೆನ್ನ ತಂಗಿಯರ್ ಕರುಳಂ ಪಿಡಿದು ನಗೆಯೊಳ್ ಪೊರಳುತ್ತುಮಿರ್ದರ್ ; ನೀನಂಜ ಲ್ವೇಡ, ಬಂದವರೊಳ್ ಸುರತಸುಖವನನುಭವಿಸುತ್ತುಮಿರ್ದಪೆ, ಬಾಯೆಂಬುದುಮಾ ಕಟ್ತೆ ಮಿಟ್ತುವಿನ ಬೆನ್ನೊಳ್ ಪೋಪಂತೆ ನರಿಯ ಬೆನ್ನೊಳ್ ಪೋಗಿ.

ಕಠಿಣ ಪದಗಳ ಅರ್ಥ :

ಜವ = ವೇಗ, ಸೃಗಾಲ = ನರಿ, ಬೆಳ್ಳಾಲ = ದಡ್ಡ,
ರಾಸಭ = ಕತ್ತೆ.

**31.** ಸಿಂಹವು ಹಸಿದು ತಿನ್ನಲು ಸಹಾಯ ಬಯಸಿದ್ದು
- (A) ಗೊಂಕರ ಕತ್ತೆಯನ್ನು
- (B) ನರಿಯ ಸಹಾಯವನ್ನು
- (C) ರಾಸಭೀ ವಿಲಾಸಿನಿಯರನ್ನು
- (D) ಸಿಂಹಿಣಿಗಳ ಸಹಾಯವನ್ನು

**32.** ನರಿಯು ಕೇಳಿಸಿಕೊಂಡ ಕತ್ತೆಯ ಸಂಕಷ್ಟದ ಸ್ವರೂಪ
- (A) ನೀರೊಳಗೆ ಯಾವಾಗಲೂ ಹೊರಳಾಡುವ ಸಂಕಷ್ಟ
- (B) ಕತ್ತೆಯ ಹೊಟ್ಟೆ ತೆಳ್ಳಗಾಗಿರುವುದು
- (C) ಬಟ್ಟೆಯೆಲ್ಲವನ್ನು ಹೇರಿ ಆಹಾರವನ್ನು ಕೊಡದಿರುವುದು
- (D) ಕತ್ತೆಗಳ ಸಂಗವಿಲ್ಲದೆ ಒಂಟಿಯಾಗಿರುವುದು

**33.** ಕತ್ತೆಯನ್ನು ನರಿಯು ಪುಸಲಾಯಿಸಿದ ವಿಷಯ
- (A) ಹೆಣ್ಣು ಕತ್ತೆಗಳ ಜೊತೆಗೆ ವಿಲಾಸಮಾಡಲು ಆಸೆ ತೋರಿದ್ದು
- (B) ಕಾಡಿನಲ್ಲಿ ನಿಶ್ಚಿಂತವಾಗಿರುವ ವಾತಾವರಣ ನಿರ್ಮಾಣ
- (C) ಅಗಸನಿಂದ ತಪ್ಪಿಸಿಕೊಳ್ಳುವ ರೀತಿ
- (D) ಹರಿಯ ಗುಹಾದ್ವಾರದಲ್ಲಿ ಹೋಗಿ ನಿಶ್ಚಿಂತೆಯಿಂದ ಇರುವುದು

**34.** ಕತ್ತೆಯನ್ನು ಮೊದಲು ಕಂಡ ಸಿಂಹವು ಮಾಡಿದ ಕಾರ್ಯ
- (A) ಹಾರಿ ಕತ್ತೆಯನ್ನು ಕೊಂದಿದ್ದು
- (B) ವೇಗವು ಕಡಿಮೆಯಾಗಿ ಹಾರಲು ಆಗದೆ ಅವಸರ ಮಾಡಿದ್ದು
- (C) ಬೆಚ್ಚಿದ ಕತ್ತೆಯನ್ನು ಓಡಿಸಿಕೊಂಡು ಹೋಗಿದ್ದು
- (D) ಸಿಂಹಿಣಿಯನ್ನು ಕರೆದು ಕತ್ತೆಯನ್ನು ಕೊಲ್ಲಲು ಹೇಳಿದ್ದು

**35.** ನರಿಯು ಕತ್ತೆಗೆ ಹೇಳಿದ ಸುಳ್ಳು
- (A) ಸಿಂಹವು ನಿನ್ನನ್ನು ಬಹಳ ಇಷ್ಟಪಟ್ಟಿದೆ ಎನ್ನುವುದು
- (B) ಗುಹೆಯ ಕತ್ತೆಗಳು, ಈ ಕತ್ತೆಯನ್ನು ಕಾಯುತ್ತಿರುವುದು
- (C) ಕಾಮದಿಂದ ಕಾತರಿಸಿದ ಹೆಣ್ಣು ಕತ್ತೆಗಳು, ಈ ಕತ್ತೆಯ ಗಂಡುತನವನ್ನು ಕಂಡು ನಕ್ಕಿದ್ದು
- (D) ಗುಹೆಯಲ್ಲಿ ಧ್ವನಿಯು ಮುದಿಯಾದ ಸಿಂಹದ್ದು ಎಂದಿದ್ದು

**ಹೇಳಿಕೆ – ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :**

**36.** **ಹೇಳಿಕೆ** : ದೇಸಿಯನೆ ನಿಱೆಸಿ ಖಂಡ ಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್.

**ವಿವರಣೆ** : ಯತಿಯನ್ನುಳಿಸಿಕೊಂಡು ಕನ್ನಡಕ್ಕೆ ವಿಶಿಷ್ಟವಾದ ಖಂಡ ಪ್ರಾಸವನ್ನು ಪೂರ್ವಾಚಾರ್ಯರು ಇರಿಸಿದರು.

(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ಸರಿ, ವಿವರಣೆ ಸರಿ
(C) ಹೇಳಿಕೆ ತಪ್ಪು, ವಿವರಣೆ ತಪ್ಪು
(D) ಹೇಳಿಕೆ ತಪ್ಪು, ವಿವರಣೆ ಸರಿ

**37.** **ಹೇಳಿಕೆ** : 'ಅವಳ ವಚನ ಬೆಲ್ಲದಂತೆ, ಹೃದಯದಲ್ಲಿಪ್ಪುದು ನಂಜು ಕಂಡಯ್ಯಾ'

**ವಿವರಣೆ** : ಹೊರಗಿನ ಮಾತು ಮತ್ತು ಒಳಗಿನ ಭಾವನೆಗಳ ವ್ಯತ್ಯಾಸವನ್ನು ಇಲ್ಲಿ ತೋರಲಾಗಿದೆ.

(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ತಪ್ಪು, ವಿವರಣೆ ತಪ್ಪು
(C) ಹೇಳಿಕೆ ಸರಿ, ವಿವರಣೆ ಸರಿ
(D) ಹೇಳಿಕೆ ತಪ್ಪು,ವಿವರಣೆ ಸರಿ

**38.** **ಹೇಳಿಕೆ** : 'ಧ್ವನಿರಾತ್ಮಾ ಕಾವ್ಯಸ್ಯ'

**ವಿವರಣೆ** : ಕಾವ್ಯದ ಆತ್ಮವು ರಸದಲ್ಲಿದೆ.

(A) ಹೇಳಿಕೆ ತಪ್ಪು, ವಿವರಣೆ ತಪ್ಪು
(B) ಹೇಳಿಕೆ ತಪ್ಪು, ವಿವರಣೆ ಸರಿ
(C) ಹೇಳಿಕೆ ಸರಿ, ವಿವರಣೆ ತಪ್ಪು
(D) ಹೇಳಿಕೆ ಸರಿ, ವಿವರಣೆ ಸರಿ

**39.** **ಹೇಳಿಕೆ** : ''ಹೊರತೆಗೆದು ಸುಟ್ಟು ಸೋಸುವ ಪರಂಜಿ ವಿದ್ಯೆಗಳ ಇನ್ನಾದರೂ ಕೊಂಚ ಕಲಿಯಬೇಕು''.

**ವಿವರಣೆ** : 'ಚಿನ್ನವನ್ನು ಹೊರಗೆ ತೆಗೆಯುವ ವಿದ್ಯೆಯನ್ನುಸ್ವಲ್ಪಸ್ವಲ್ಪವೇ ಕಲಿಯಬೇಕು'.

(A) ಹೇಳಿಕೆ ಸರಿ, ವಿವರಣೆ ಸರಿ
(B) ಹೇಳಿಕೆ ತಪ್ಪು, ವಿವರಣೆ ಸರಿ
(C) ಹೇಳಿಕೆ ಸರಿ, ವಿವರಣೆ ತಪ್ಪು
(D) ಹೇಳಿಕೆ ತಪ್ಪು, ವಿವರಣೆ ತಪ್ಪು

**40.** **ಹೇಳಿಕೆ** : 'ಪರಪದ ಪೂರ್ವಂ ದ್ವಿತ್ವಾಕ್ಷರಮಾಗಿರೆ, ಪೂರ್ವ ಪದದ ಚರಮಂ ಹ್ರಸ್ವಾಕ್ಷರ ಮಾಗೆ ಸಂಧಿದೋಷಂ'

**ವಿವರಣೆ** : ಪೂರ್ವ ಪದದ ಮೊದಲಿಗೆ ಒತ್ತಕ್ಷರವಿದ್ದು ಪರ ಪದದ ಆರಂಭದಲ್ಲಿ ಲಘು ಅಕ್ಷರವಿದ್ದರೆ ಸಂಧಿದೋಷವಾಗುವುದು.

(A) ಹೇಳಿಕೆ ಸರಿ, ವಿವರಣೆ ಸರಿ
(B) ಹೇಳಿಕೆ ಸರಿ, ವಿವರಣೆ ತಪ್ಪು
(C) ಹೇಳಿಕೆ ತಪ್ಪು, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆ ತಪ್ಪು

**41.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುತ್ತದೆ ?

(A) ಕೇಶಿರಾಜನ ಶಬ್ದಮಣಿದರ್ಪಣ – ಗದ್ಯ ಕೃತಿ
(B) ನಾಗಚಂದ್ರನ ಪಂಪ ರಾಮಾಯಣ – ಷಟ್ಪದಿ
(C) ಷಡಕ್ಷರ ಕವಿಯ ಶಬರಶಂಕರ ವಿಳಾಸ – ಚಂಪೂ
(D) ನೇಮಿಚಂದ್ರರ –ಲೀಲಾವತಿ – ಸಾಂಗತ್ಯ

**42.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಾಣಿಕೆಯಾಗುವುದಿಲ್ಲ?

(A) ಚಾವುಂಡರಾಯ – ಗಂಗರಾಚಮಲ್ಲ
(B) ನಾಗವರ್ಮ II – ಚಾಲುಕ್ಯ ಜಗದೇಕಮಲ್ಲ
(C) ದುರ್ಗಸಿಂಹ – ಚಾಲುಕ್ಯ ತೈಲಪ
(D) ನಾಗಚಂದ್ರ – ಹೊಯ್ಸಳ ಒಂದನೆಯ ಬಲ್ಲಾಳ

**43.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಾಣಿಕೆ ಆಗುತ್ತದೆ ?

(A) ದೇಪರಾಜ – ನೇಮಿಜಿನೇಶಸಂಗತಿ
(B) ಜಗನ್ನಾಥದಾಸ – ಹರಿಕಥಾಮೃತಸಾರ
(C) ಚಾಟುವಿಠಲನಾಥ – ತುರಂಗಭಾರತ
(D) ಲಕ್ಕಣ್ಣ ದಂಡೇಶ – ಪ್ರಭುದೇವರ ಪುರಾಣ

**44.** ಕೆಳಗಿನವುಗಳಲ್ಲಿ ಯಾವುದು ಸರಿ ಹೊಂದಾಣಿಕೆಯಾಗುವುದಿಲ್ಲ?

(A) ಲಾಂಜಿನಸ್ – ಪೆರಿಹುಪ್ಸಾಸ್

(B) ಕೋಲ್‌ರಿಜ್ – ಮೂಲಪ್ರತಿಭೆ

(C) ಮ್ಯಾಥ್ಯೂ ಅರ್ನಾಲ್ಡ್ – ಪ್ರಿಫೇಸ್ ಟು ಪೋಯಮ್ಸ್ ಆಫ್ – 1853

(D) ಪ್ಲೇಟೋ – ಡಿಫೆನ್ಸ್ ಆಫ್ ಪೋಯೆಸಿ

**45.** ಕೆಳಗಿನವುಗಳಲ್ಲಿ ಯಾವುದು ಸರಿ ಹೊಂದಾಣಿಕೆ ಆಗುತ್ತದೆ ?

(A) ಚೆನ್ನವೀರ ಕಣವಿ – ಮೌನದ ಹೊತ್ತು

(B) ಮಧುರ ಚೆನ್ನ – ಕಾಳರಾತ್ರಿ

(C) ಕೆ. ಎಸ್. ನರಸಿಂಹಸ್ವಾಮಿ – ಮಧುಚಂದ್ರ

(D) ಪು.ತಿ.ನ. – ಐರಾವತ

**46.** ಬಹು ಆಯ್ಕೆಯ ಜೋಡಣೆ.

| | | | |
|---|---|---|---|
| a) | ಭಾರತ ಸಿಂಧೂ ರಶ್ಮಿ | 1) | ವಿಮರ್ಶೆ |
| b) | ನೋಂಬು | 2) | ನಾಟಕ |
| c) | ಕಪ್ಪು ಕಾಡಿನ ಹಾಡು | 3) | ಮಹಾಕಾವ್ಯ |
| d) | ಪಾರಸಿಕರು | 4) | ಕಥಾಸಂಕಲನ |
| | | 5) | ಕವನಸಂಕಲನ |

**ಇವುಗಳಿಗೆ ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | 4 | 5 | 2 | 1 |
| (B) | 3 | 4 | 5 | 2 |
| (C) | 1 | 3 | 5 | 2 |
| (D) | 2 | 1 | 4 | 5 |

**47.** ಬಹು ಆಯ್ಕೆಯ ಜೋಡಣೆ.

| | | | |
|---|---|---|---|
| a) | ಮೂಲ ಪ್ರತಿಭೆ | 1) | ಕ್ರೋಚೆ |
| b) | ಕಾವ್ಯ ಸಮರ್ಥನೆ | 2) | ಸಿ.ಡೆ. ಲೂಯಿ |
| c) | ವ್ಯಕ್ತಿತ್ವ ನಿರಸನ | 3) | ಕೋಲ್‌ರಿಜ್ |
| d) | ಅಭಿವ್ಯಕ್ತಿ | 4) | ಟಿ. ಎಸ್. ಇಲಿಯೆಟ್ |
| | | 5) | ಶೆಲ್ಲಿ |

**ಇವುಗಳಿಗೆ ಸರಿಯಾದ ಉತ್ತರ :**

| | a | b | c | d |
|---|---|---|---|---|
| (A) | 3 | 5 | 4 | 1 |
| (B) | 5 | 3 | 1 | 2 |
| (C) | 1 | 5 | 3 | 4 |
| (D) | 2 | 4 | 5 | 3 |

**ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿ.**

**48.** (A) ಜೈಮಿನಿ ಭಾರತ, ಹರಿಕಥಾಮೃತಸಾರ, ವಿವೇಕ ಚಿಂತಾಮಣಿ, ಕಂಠೀರವನರಸರಾಜ ವಿಜಯ

(B) ವಿವೇಕ ಚಿಂತಾಮಣಿ, ಜೈಮಿನಿ ಭಾರತ, ಕಂಠೀರವನರಸರಾಜ ವಿಜಯ, ಹರಿಕಥಾಮೃತಸಾರ

(C) ಕಂಠೀರವನರಸರಾಜ ವಿಜಯ, ವಿವೇಕ ಚಿಂತಾಮಣಿ, ಹರಿಕಥಾಮೃತಸಾರ, ಜೈಮಿನಿ ಭಾರತ

(D) ಹರಿಕಥಾಮೃತಸಾರ, ಜೈಮಿನಿ ಭಾರತ, ವಿವೇಕ ಚಿಂತಾಮಣಿ, ಕಂಠೀರವನರಸರಾಜ ವಿಜಯ

**49.** (A) ಶಿವಕೋಟ್ಯಾಚಾರ್ಯ, ನಯಸೇನ, ಹರಿಹರ, ಆಂಡಯ್ಯ

(B) ನಯಸೇನ, ಹರಿಹರ, ಶಿವಕೋಟ್ಯಾಚಾರ್ಯ, ಆಂಡಯ್ಯ

(C) ಶಿವಕೋಟ್ಯಾಚಾರ್ಯ, ಆಂಡಯ್ಯ, ನಯಸೇನ, ಹರಿಹರ,

(D) ಶಿವಕೋಟ್ಯಾಚಾರ್ಯ, ಹರಿಹರ, ಆಂಡಯ್ಯ, ನಯಸೇನ

**50.** (A) ಶಿವಗಣಪ್ರಸಾದಿ ಮಹಾದೇವಯ್ಯ, ಶ್ರೀಪಾದರಾಯ, ಸರ್ವಜ್ಞ, ಕೆಂಪು ನಾರಾಯಣ

(B) ಶ್ರೀಪಾದರಾಯ, ಸರ್ವಜ್ಞ, ಶಿವಗಣಪ್ರಸಾದಿ ಮಹಾದೇವಯ್ಯ, ಕೆಂಪು ನಾರಾಯಣ

(C) ಸರ್ವಜ್ಞ, ಕೆಂಪು ನಾರಾಯಣ, ಶ್ರೀಪಾದರಾಯ, ಶಿವಗಣಪ್ರಸಾದಿ ಮಹಾದೇವಯ್ಯ

(D) ಶಿವಗಣಪ್ರಸಾದಿ ಮಹಾದೇವಯ್ಯ, ಸರ್ವಜ್ಞ, ಕೆಂಪು ನಾರಾಯಣ, ಶ್ರೀಪಾದರಾಯ.

ಚಿತ್ತು ಬರಹಕ್ಕಾಗಿ ಸ್ಥಳ

**Space for Rough Work**